1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 17

CW- 31

ಪ್ರ. ಬೋ. ದಿನಾಂಕಃ 24-01-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಮಹಾದೇವಪ್ಪ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಿಪಿ.30 ಫೋಟೋ ನೋಡುತ್ತಿದ್ದು, ಅದರಲ್ಲಿ ಬೈಕ್ ಪಕ್ಕ ನಿಂತ ವ್ಯಕ್ತಿ ನಾನೇ ಇರುತ್ತೇನೆ. ಪೊಲೀಸರು ಬೈಕ್ ಹಾಜರುಪಡಿಸಲು ಹೇಳಿದ್ದರಿಂದ ನಾನು ಹಾಜರುಪಡಿಸಿರುತ್ತೇನೆ. ಸದರಿ ಬೈಕ್ 2 ನೇ ಆರೋಪಿಗೆ ಸೇರಿದೆ. ಸದರಿ ಬೈಕ್ ಆಸ್ಪತ್ರೆಯ ಮುಂಭಾಗದಲ್ಲಿ ನಿಂತಿತ್ತು. ಆಗ ಪೊಲೀಸರು ನಿಪಿ.31 ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ನೋಡುತ್ತಿದ್ದು, ಅದರಲ್ಲಿನ ನನ್ನ ರುಜುವನ್ನು ನಿಪಿ.31(ಸಿ) ಎಂದು ಗುರುತಿಸಲಾಯಿತು. ಬೈಕ್ ನಂಬರ್ ನೆನಪಿಲ್ಲ. ಆರೋಪಿತರು ದಸ್ತಗಿರಿ ಮಾಡಲಾಗಿದೆ, ಬೈಕ್ ಹಾಜರುಪಡಿಸಬೇಕೆಂದು ಹೇಳಿದ್ದರು. ಆದಕ್ಕೆ ನಾನು ಹಾಜರುಪಡಿಸಿರುತ್ತೇನೆ. ಸದರಿ ಬೈಕ್ ಹಾಂಡ್ ಲಾಕ್ ಆಗಿತ್ತು, ಅದನ್ನು ಆಟೋದಲ್ಲಿ ತೆಗೆದುಕೊಂಡು ಠಾಣೆಯಲ್ಲಿ ಹಾಜರುಪಡಿಸಿರುತ್ತೇನೆ, ನನ್ನ ತಂಗಿಯನ್ನು 2 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿದ್ದು , ಆತ ನನಗೆ ಭಾವನಾಗಬೇಕು. ಮೃತ ಕುಮಾರ ಮತ್ತು ಗಾಯಾಳು ಫಕ್ಕಿರಪ್ಪ ಇವರು ನನಗೆ ಗೊತ್ತಿಲ್ಲ, ಆದರೆ ಸದರಿಯವರು ಆರೋಪಿತರ ಅಣ್ಣತಮ್ಮಂದಿರಾಗಬೇಕು ಎಂದು ಹೇಳಿದ್ದರು. ಯಾವ ವಿಚಾರವಾಗಿ ಅವರಿಬ್ಬರ ಮಧ್ಯ ಜಗಳವಿತ್ತು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ

ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ದಿ.14-05-2023 ರಂದು ರಾತ್ರಿ 12-00 ಗಂಟೆ ಸಮಯದಲ್ಲಿ 2 ನೇ ಆರೋಪಿ ನನ್ನ ಮಾವ ನನಗೆ ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆಸಿಕೂಂಡು , ಅವರಿಗೆ ಸೇರಿದ ಕೆಎ-17 ಹೆಚ್ ಎಲ್ 0452 ಬೈಕನ್ನು ತೆಗೆದುಕೊಂಡು ಹೋಗು ಎಂದು ನನಗೆ ಹೇಳಿರುತ್ತಾನೆ ಎನ್ನುವುದು ಸುಳ್ಳು. ಆ ಪ್ರಕಾರ ನಾನು ಬೈಕನ್ನು ನನ್ನ ಮನೆಗೆ ತೆಗೆದುಕೊಂಡು ಹೋಗಿರುತ್ತೇನೆ ಎನ್ನುವುದು ಸುಳ್ಳು. ಪೊಲೀಸರು ಆರೋಪಿತರು ಮತ್ತು ಮೃತ ಕುಮಾರನ ಮಧ್ಯ ಸಿವಿಲ್ ವ್ಯಾಜಲ್ಯ ಇದ್ದು,ಅದರಿಂದ ಇಬ್ಬರ ಮಧ್ಯ ದ್ವೇಷ ಇದ್ದು , ಆಗ ಆರೋಪಿತರು ಕುಮಾರನನ್ನು ಕೊಲೆ ಮಾಡಿ , ಫಕ್ಕಿರಪ್ಪನನ್ನು ಕೊಲೆ ಮಾಡಿದ್ದು , ಈ ವಿಷಯಕ್ಕೆ ಸಂಬಂಧಪಟ್ಟಂತೆ ಬೈಕನ್ನು ಹಾಜರುಪಡಿಸಲು ಪೊಲೀಸರು ನನಗೆ ಹೇಳಿದ್ದರಿಂದ ಬೈಕನ್ನು ಹಾಜರುಪಡಿಸಿರುತ್ತೇನೆ ಎನ್ನುವುದು ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಪಿ.31 ಮಹಜರ್ ಮಾಡಿ , ಓದಿ ಹೇಳಿ ನನ್ನ ಸಹಿ ಪಡೆದಿದ್ದಾರೆ ಎನ್ನುವುದು ಸುಳ್ಳು. ಎಲ್ಲಾ ವಿಷಯ ಗೊತ್ತಿದ್ದು, 2 ನೇ ಆರೋಪಿ ನನ್ನ ಭಾವನಾಗಬೇಕಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸರ ಮುಂದೆ ನಿಪಿ.46 ರಂತೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸುಳ್ಳು.

ಪಾಟೀಸವಾಲುಃ- 1 ಮತ್ತು 2 ನೇ ಆರೊಪಿತರಪರ ಶ್ರೀ ಪಿ.ಬಿ ವಕೀಲರಿಂದ.

ನಾನು ಆಸ್ಪತ್ರೆಗೆ ಹೋದ ಸಮಯದಲ್ಲಿ ಪೊಲೀಸರು ಇರಲಿಲ್ಲ. ಬೈಕನ್ನು ತೆಗೆದುಕೊಂಡು ಹೋಗುವ ಪೂರ್ವದಲ್ಲಿ ಪೊಲೀಸರಿಗೆ ನಾನು ಮಾಹಿತಿ ಕೊಟ್ಟಿಲ್ಲ. ನಿಪಿ.31 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಮಾಹಿತಿ ಕೊಟ್ಟಿಲ್ಲ, ಆ ಪ್ರಕಾರ ನಾನು ಬೈಕನ್ನು ಠಾಣೆಗೆ ಹಾಜರುಪಡಿಸದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 16

CW- 30

ಪ್ರ. ಬೋ. ದಿನಾಂಕಃ 24-01-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಹರೀಶ್ |
| ತಂದೆ/ಗಂಡನ ಹೆಸರು | : | ನೀಲಕಂಠಾಚಾರ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಕಾರ್ಪೆಂಟರ್ |
| ವಾಸ | : | ಹರಿಹರ . |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಸುಮಾರು ಹತ್ತು ವರ್ಷದಿಂದ ನಾನು ಕಾರ್ಪೆಂಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ಮೃತ ಕುಮಾರ ನನಗೆ ಗೊತ್ತು. ನಾನು ಆತನ ಜೊತೆ ಕೆಲಸ ಮಾಡುತ್ತಿದ್ದೆ. ಆತನನ್ನು ಕೊಲೆ ಮಾಡಿದ್ದರಿಂದ ಮೃತಪಟ್ಟಿರುತ್ತಾನೆ. ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಕಮಾರನ ಕೊಲೆಯಾಗಿದೆ ಎಂದು ಗೊತ್ತಾಯಿತು. ನಾನು ನನ್ನ KA-17 HF-2076 ಪಲ್ಸರ್ ಬೈಕಿನಲ್ಲಿ ಓಡಾಡುತ್ತೆನೆ.

ದಿ.14-05-2023 ರಂದು ನನ್ನ ಬೈಕ್ ನ್ನು ನಾನು ಕುಮಾರನಿಗೆ ನೀಡಿದ್ದೇನೆ. ಕುಮಾರನು ನನ್ನ ಅಳಿಯನಿಗೆ ಹೆಣ್ಣು ನೋಡಲು ಹೋಗುತ್ತಿದ್ದೇನೆ ಎಂದು ಕೇಳಿದ್ದ ಅದಕ್ಕೆ ನನ್ನ ಬೈಕ್ ಕೊಟ್ಟಿರುತ್ತೇನೆ. ಬೈಕಿನಿಂದ ವಾಪಸ್ ಬರುವುವಾಗ ಬಾತಿ ಹತ್ತಿರ ಬಂದಾಗ ಆರೋಪಿತರು ಮತ್ತು ಕುಮಾರನ ಮಧ್ಯ ಸ್ವಲ್ಪ ಜಗಳವಾಗಿ , ನಂತರ ಆತ ಏನು ಮಾಡುತ್ತೀರಿ ಎಂದು ಮನೆ ಕಡೆ ಬಂದ. ಆಗ ಬಾತಿ ಕ್ರಾಸ್ ಹತ್ತಿರ ಬರುತ್ತಿರುವಾಗಿ ಸದರಿ ಕುಮಾರು ಈತನು ಬರುವ ಪೂರ್ವದಲ್ಲಿ ಆರೋಪಿತರು ರಸ್ತೆ ಹತ್ತಿರ ಬಂದು ನಿಂತಿದ್ದು , ಆಗ ಆರೋಪಿತರು ಮತ್ತು ಕುಮಾರ್ ಇವರ ಮಧ್ಯ ಸ್ವಲ್ಪ ಜಗಳವಾಗಿತ್ತು. ನಂತರ ಕುಮಾರನ ಅಣ್ಣ ಫಕ್ಕಿರಪ್ಪ ಇವರು ಆಸ್ಪತ್ರೆಗೆ ಬರುತ್ತಿರುವಾಗ ಅದಕ್ಕಿಂತ ಪೂರ್ವದಲ್ಲಿ

ಆರೋಪಿತರು ಆಸ್ಪತ್ರೆಗೆ ಬಂದು ಕುಳಿತಿದ್ದು , ನಂತರ ಇವ ರು ಆಸ್ಪತ್ರೆಗೆ ತುರ್ತು ಚಿಕಿತ್ಸಾ ಘಟಕಕ್ಕೆ ಬಂದಾಗ ಆರೋಪಿತರು ಚಾಕುವಿನಿಂದ ಕುಮಾರನ ಎದೆಗೆ, ಹೊಟ್ಟೆಗೆ ಹಾಕಿರುತ್ತಾರೆ ಎಂದು ಬೇರೆಯವರ ಕಡೆಯಿಂದ ಗೊತ್ತಾಯಿತು. ನಂತರ ದಾವಣಗೆರೆ ಆಸ್ಪತ್ರೆಗೆ ರಾತ್ರಿ ವೈಯುತ್ತಿರುವಾಗ ರಸ್ತೆ ಮಾರ್ಗ ಮಧ್ಯದಲ್ಲಿ ರಾತ್ರಿ 11-14 ಕ್ಕೆ ಮೃತಪಟ್ಟಿರುತ್ತಾನೆ ಎಂದು ಗೊತ್ತಾಯಿತು. ಕುಮಾರನ ಅಣ್ಣ ಫಕ್ಕಿರಪ್ಪನ ಎದೆಗೆ , ತುಟಿಗೆ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು.

<u>ಪಾಟೀಸವಾಲುಃ</u>- 1 ಮತ್ತು 2 ನೇ ಆರೊಪಿತರಪರ ಶ್ರೀ ಪಿ.ಬಿ ವಕೀಲರಿಂದ.

ನಾನು ಮತ್ತು ಕುಮಾರ ಇಬ್ಬರು ಸ್ನೇಹಿತರು, ಆದರೆ ಫಕ್ಕಿರಪ್ಪ ಅಲ್ಲ. ಆದಿನ ಬೆಳಿಗ್ಗೆ 11-00 ಗಂಟೆಗೆ ಬೈಕನ್ನು ನಾನು ಕುಮಾರನಿಗೆ ಕೊಟ್ಟಿರುತ್ತೇನೆ. ಘಟನೆಗೆ ಸಂಬಂಧಪಟ್ಟಂತೆ ಮಾರನೇ ದಿನ ಬೆಳಿಗ್ಗ 10-30, 11-00 ಕ್ಕೆ ಗೊತ್ತಾಯಿತು. ಆ ಸಮಯದಲ್ಲಿ ನಾನು ಮನೆಯಲ್ಲಿದ್ದೆ. ನನ್ನ ಸ್ನೇಹಿತ ಫೋನ್ ಮಾಡಿ ವಿಷಯ ತಿಳಿಸಿದ. ವಿಷಯ ಗೊತ್ತಾದ ನಂತರ ನಾನು ಆಸ್ಪತ್ರೆಗೆ ನೋಡಲು ಹೋಗಿಲ್ಲ, ಹಾಗೂ ಕುಮಾರನ ಮನೆ ಹತ್ತಿರ ಸಹ ನಾನು ನೋಡಲು ಹೋಗಿಲ್ಲ. ಕುಮಾರ್ ಈತನ ಸಂಬಂಧಿಕರು ಒಬ್ಬರು ನನ್ನ ಬೈಕ್ ಕೀಯನ್ನು ತಂದು ಕೊಟ್ಟರು. ಬೈಕ್ ಕೀ ತಂದು ಕೊಟ್ಟಾಗ ಸಮಯಎಷ್ಟಾಗಿತ್ತು ಎಂದು ನೆನಪಿಲ್ಲ. ಬೈಕ್ ಕೊಟ್ಟ ವ್ಯಕ್ತಿಯ ಹೆಸರು ಗೊತ್ತಿಲ್ಲ. ಬೈಕಿನ ಮೇಲೆ ನನ್ನ ಹೆಸರಾಗಲಿ ನನ್ನ ಮೋಬೈಲ್ ನಂಬರ್ ಆಗಲಿ ಬರೆದಿಲ್ಲ. ಕುಮಾರ್ ಇವರ ಮನೆಯವರು ಹೇಳಿದ್ದರಿಂದ ಆ ಹುಡುಗ ನನಗೆ ತಂದು ಕೊಟ್ಟ. ನನ್ನ ಬೈಕನ್ನು ಹಾಜರುಪಡಿಸುವುದರ ಬಗ್ಗೆ ಪೊಲೀಸರು ನನಗೆ ನೋಟೀಸು ಕೊಟ್ಟಿಲ್ಲ. ನನ್ನ ಪಲ್ಸರ್ ಬೈಕನು ಮೃತ ಕುಮಾರ್ ಈತನು ಆ ದಿನ ತೆಗೆದುಕೊಂಡು ಹೋಗಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಂತರ ಕುಮಾರ್ ಈತನು ಮರಣ ಹೊಂದಿದ ವಿಚಾರ ಗೊತ್ತಾಯಿತು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದೊಡ್ಡಬಾತಿ ಹತ್ತಿರ ಗಲಾಟೆಯಾದ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದಾಗ ಹೇಳಿರುತ್ತೇನೆ. ನಂತರ ಆಸ್ಪತ್ರೆಗೆ ಬಂದರು , ಅದಕ್ಕು ಪೊವರ್ದಲ್ಲಿ ಆರೋಪಿತರು ಆಸ್ಪತ್ರೆಗೆ ಬಂದಿದ್ದರು , ಕುಮಾರ ಅವರು ಆಸ್ಪತ್ರೆಯ ತುರ್ತು ಘಟಕಕ್ಕೆ ಚಿಕಿತ್ಸೆಗೆ ಹೋದಾಗ ಆರೋಪಿತರು ಚಾಕವಿನಿಂದ ಕುಮಾರನ ಎದೆಗೆ , ಹೊಟ್ಟೆಗೆ ಇತರೆ ಭಾಗಕ್ಕೆ ಚುಚ್ಚಿರುತ್ತಾರೆ ಎಂದು ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು

ಸರಿಯಲ್ಲ. ಅದೇ ಪ್ರಕಾರ ಫಕ್ಕಿರಪ್ಪ ಇವರ ಎದೆಗೆ , ತುಟಿಗೆ ಹಲ್ಲೆ ಮಾಡಿದರು ಎಂದು ಗೊತ್ತಾಯಿತು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ನ ನಗೆ ಏನೂ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 15

CW- 32

ಪ್ರ. ಬೋ. ದಿನಾಂಕಃ 24-01-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಡಾ. ಹನುಮಾನಾಯ್ಕ |
| ತಂದೆ/ ಗಂಡನ ಹೆಸರು | : | ಹೇಮ್ಲಾನಾಯ್ಕ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಆಡಳಿತ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ , ಹರಿಹರ |
| ವಾಸ | : | ಹರಿಹರ . |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿ.13-08-2018 ರಿಂದ ನಾನು ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಡಳಿತಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಚಾಸಾ-16 ರಿಂದ 24 ನಮ್ಮ ಆಸ್ಪತ್ರೆಯ ಸಿಬ್ಬಂದಿಗಳಾಗಿರುತ್ತಾರೆ. ಚಾಸಾ-16 ಡಾ.ಸವಿತಾ ಇವರು ಹೆರಿಗೆ ಮತ್ತು ಪ್ರಸೂತಿ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ದಿ.14-05-2023 ರಲ್ಲಿ ನಮ್ಮ ಸಾರ್ವಜನಿಕ ಆಸ್ಪತ್ರೆಯ ತುರ್ತು ಘಟನೆಯ ವಿಭಾಗದಲ್ಲಿ ಕೊಲೆ ನಡೆದಿತ್ತು. ಈ ಘಟನೆಗೆ ಸಂಬಂಧಪಟ್ಟಂತೆ ರಾತ್ರಿ ಪಾಳೆಯಲ್ಲಿ ಕೆಲಸ ಮಾಡುತ್ತಿದ್ದ ವೈದ್ಯರು , ನರ್ಸಿಂಗ್ ವಿಭಾಗದವರು ಮತ್ತು ಡಿ ಗ್ರೂಪ್ ಸಿಬ್ಬಂದಿಗಳ ವಿವರ ನೀಡಬೇಕೆಂದು ಹರಿಹರ ಪೊಲೀಸರು ಕೇಳಿದ್ದರು ಹಾಗೂ ಸಿ ಸಿ ಟಿವಿ ಫೋಟೋಜೇ ಕೇಳಿದ್ದರು. ಇಬ್ಬರು ಪಂಚರು ಬೇಕು ಅಂತಾ ಕೇಳಿದ್ದು , ಡಾ. ಕಿರಣ್ ಕುಮಾರ್ ಮತ್ತು ಶ್ರೀಮತಿ ಗೀತಾ ಇವರಿಗೆ ಪಂಚರಾಗಿ ಹೋಗಲು ನಾನು ತಿಳಿಸಿರುತ್ತೇನೆ.

ಆರೋಪಿತರಿಗೆ ಸಂಬಂಧಪಟ್ಟ ಎಂ ಎಲ್ ಸಿ ರಿಜಿಸ್ಟರ್ ಎಕ್ಸಟ್ರಾಕ್ಟ ಕೇಳಿದ್ದರು. ನಮ್ಮ ಆಸ್ಪತ್ರೆ ಹರಿಹರದ ಯಾವ ಏರಿಯಾದಲ್ಲಿ ಬರುತ್ತದೆ ಎಂದು ಆಸ್ಪತ್ರೆಯ ದಾಖಲೆ

ಕೇಳಿದ್ದರು, ನೀಡಿದ್ದೇನೆ.

ಘಟನೆಯಾದ ಸ್ಥಳ ನಿಪಿ.5 ಮತ್ತು 6 ಫೋಟೋದಲ್ಲಿ ಕಾಣಿಸುತ್ತಿರುವ ಸ್ಥಳವಾಗಿದೆ. ಎರಡು ಜನ ಪಂಚರನ್ನಾಗಿ ನೇಮಿಸಬೇಕೆಂದು ದಿ.25-05-2023 ರಂದು ಹರಿಹರ ನಗರ ಪೊಲೀಸ್ ಠಾಣಾ ಅಧಿಕಾರಿ ನಮಗೆ ಬರೆದ ಪತ್ರನೋಡುತ್ತಿದ್ದು , ಅದನ್ನು ನಿಪಿ.32 ಎಂದು ಗುರುತಿಸಲಾಯಿತು. ಆ ಪ್ರಕಾರ ನಾನು ಶ್ರೀಮತಿಗೀತಾ ಮತ್ತು ಡಾ.ಕಿರಣ್ ಕುಮಾರ್ ಇವರನ್ನು ನೇಮಕ ಮಾಡಿದ್ದರ ಬಗ್ಗೆ ಪೊಲೀಸರಿಗೆ ಪತ್ರ ಬರೆದಿದ್ದು , ಅದನ್ನು ನೋಡುತ್ತಿದ್ದು, ನಿಪಿ.33 ಎಂದು ಗುರುತಿಸಲಾಯಿತು. ಮಹಜರ್ ಮಾಡಿದ ಸ್ಥಳ ನಿಪಿ.27, 28 ಫೋಟೋದಲ್ಲಿ ಕಾಣುತ್ತಿರುವ ಸ್ಥಳವಾಗಿದೆ.

ದಿ.17-05-2023 ರಂದು ಪೊಲೀಸರು ಕರ್ತವ್ಯದಲ್ಲಿರುವ ವೈದರು ಮತ್ತು ಸಿಬ್ಬಂದಿಗಳ ದೃಢೀಕರಣ ಪತ್ರ ನೀಡುವಂತೆ ನೀಡಿದ ಪತ್ರ ನೋಡುತ್ತಿದ್ದು , ಅದನ್ನು ನಿಪಿ.34 ಎಂದು ಗುರುತಿಸಲಾಯಿತು. ಆ ಪ್ರಕಾರ ನಾನು ದಿ.22-05-2023 ರಂದು ಆ ದಿನ ಕರ್ತವ್ಯದಲ್ಲಿದ್ದ ಡಾ.ಸವಿತಾ ಮತ್ತು ಇನ್ನಿತರೆ ಸಿಬ್ಬಂದಿಗಳ ಬಗ್ಗೆ ಮಾಹಿತಿ ಪೊಲೀಸರಿಗೆ ನೀಡಿದ ಪತ್ರ ನೋಡುತ್ತಿದ್ದು, ಅದನ್ನು ನಿಪಿ.35 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು , ರುಜುವನ್ನು ನಿಪಿ.35(ಎ) ಎಂದು ಗುರುತಿಸಲಾಯಿತು. ಪೊಲೀಸರು ಮೃತಪಟ್ಟ ಕುಮಾರ್ ಜಿ ಮತ್ತು ಗಾಯಾಳು ಇವರಿಗೆ ಸಂಬಂಧಪಟ್ಟಂತೆ ಗಾಯದ ಪ್ರಮಾಣಪತ್ರ ನೀಡುವಂತೆ ಕುರಿತು ಪತ್ರ ಬರೆದಿದ್ದು, ಅದನ್ನು ನಿಪಿ.36 ಎಂದು ಗುರುತಿಸಲಾಯಿತು. ಆ ಪ್ರಕಾರ ನಾನು ದಿ.23-05-2023 ರಂದು ಮಾಹಿತಿ ನೀಡಿದ್ದು , ಇದಕ್ಕೆ ಸಂಬಧಪಟ್ಟಂತೆ ಪೊಲೀಸರಿಗೆ ಕೊಟ್ಟ ಪತ್ರವನ್ನು ನಿಪಿ.37 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ.37(ಎ) ಎಂದು ಗುರುತಿಸಲಾಯಿತು.

ಎಂ ಎಲ್ ಸಿ ರಿಜಿಸ್ಟರ್ ಎಕ್ಸಟ್ರಾಕ್ಟ ನಿಪಿ.12 ನೋಡುತ್ತಿದ್ದು , ಅರದಲ್ಲಿ ನನ್ನ ರುಜು ಇದ್ದು, ನಿಪಿ.12(ಎ) ಎಂದು ಗುರುತಿಸಲಾಯಿತು. ಅದೇ ಪ್ರಕಾರ ಗಾಯಾಳು ರಾಜು ಇವರಿಗೆ ಸಂಬಂಧಪಟ್ಟ ಎಂ ಎಲ್ಸಿ ರಜಿಸ್ಟರ್ ನೋಡುತ್ತಿದ್ದು, ನಿಪಿ.13 ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿ ನನ್ನ ರುಜು ಇದ್ದು, ನಿಪಿ.13(ಎ) ಎಂದು ಗುರುತಿಸಲಾಯಿತು. ನಿಪಿ.17 ದಾಖಲೆ ನೋಡುತ್ತಿದ್ದು , ಅದರಲ್ಲಿ ನನ್ನ ರುಜು ಇದ್ದು , ನಿಪಿ.17(ಎ) ಎಂದು ಗುರುತಿಸಲಾಯಿತು. ಮಾರುತಿ ಮತ್ತು ರಾಜು ಇವರ ಗಾಯದ ಪ್ರಮಾಣಪತ್ರ ನೀಡಿದ್ದು , ಅವುಗಳನ್ನು ನಿಪಿ.14 ಮತ್ತು 15 ಎಂದು ಈಗಾಗಲೇ

ಗುರುತಿಸಲಾಗಿದೆ. ಅವುಗಳಲ್ಲಿ ನನ್ನ ರುಜು ವಿದ್ದು ರುಜುಗಳನ್ನು ನಿಪಿ.14(ಎ) ಮತ್ತು 15 (ಎ) ಎಂದು ಗುರುತಿಸಲಾಯಿತು.

ನಮ್ಮ ಆಸ್ಪತ್ರೆಯಲ್ಲಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಗಳನ್ನು ಪೊಲೀಸರಿಗೆ ಪತ್ರದೊಂದಿಗೆ ನೀಡಿದ್ದು , ಸದರಿ ಪತ್ರ ನೋಡುತ್ತಿದ್ದು, ಅದನ್ನು ನಿಪಿ.38 ಎಂದು, ನನ್ನ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು. ಸದರಿ ಪತ್ರದೊಂದಿಗೆ ಆರು ಪಹಣಿ ಪತ್ರಿಕೆ ನೀಡಿದ್ದು, ಅವುಗಳನ್ನು ನಿಪಿ.39 ರಿಂದ 44 ಎಂದು ಗುರುತಿಸಲಾಯಿತು. ದಿ.20-05-2023 ರಂದು ಪೊಲೀಸರು ನಮ್ಮ ಆಸ್ಪತ್ರೆಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ಫೋಟೇಜ್ ನೀಡುವಂತೆ ಮನವಿ ಪತ್ರ ನೀಡಿದ್ದು , ಅದನ್ನು ನಿಪಿ.45 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- 1 ಮತ್ತು 2 ನೇ ಆರೊಪಿತರಪರ ಶ್ರೀ ಪಿ.ಬಿ ವಕೀಲರಿಂದ.

ದಿ.14-05-2023 ರಾತ್ರಿ 10-45 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಫೋನಿನ ಮುಖಾಂತರ ಡಾ. ಸವಿತಾ ಇವರು ಘಟನೆಯ ಬಗ್ಗೆ ಮಾಹಿತಿ ನೀಡಿದರು. ವಿಷಯ ಗೊತ್ತಾದ ತಕ್ಷಣ ನಾನು ಆಸ್ಪತ್ರೆಗೆ ಬರಲು ಪ್ರಯತ್ನಪಟ್ಟೆ . ನಮ್ಮ ಮನೆಯಿಂದ 10 ಕಿಮಿ ದೂರದಲ್ಲಿ ನಮ್ಮ ಆಸ್ಪತ್ರೆಯಿದೆ. ನಮ್ಮ ಮನೆಯಿಂದ ಕಾರ್ ಮುಖಾಂತರ ಆಸ್ಪತ್ರೆಗೆ ಬರಬೇಕಾದರೆ 20 ನಿಮಿಷ ಬೇಕಾಗುತ್ತದೆ. ಆ ಸಂದರ್ಭದಲ್ಲಿ ನಾನು ಆಸ್ಪತ್ರೆಗೆ ಬಂದು ಯಾವ ರೀತಿ ಘಟನೆ ನಡೆದಿದೆ ಎಂದು ಪರಿಶೀಲನೆ ಮಾಡಲು ಪ್ರಯತ್ನಪಟ್ಟಿಲ್ಲ. ತಕ್ಷಣ ನನಗೆ ಆಸ್ಪತ್ರೆಗೆ ಬಂದು ಪರಿಶೀಲನೆ ಮಾಡಲು ತೊಂದರೆ ಇರಲಿಲ್ಲ. ವಾಹನದ ತೊಂದರೆ ಇದ್ದದ್ದರಿಂದ ಆಸ್ಪತ್ರೆಗೆ ಬರಲು ಆಗಲಿಲ್ಲ. ನನ್ನ ಮನೆ ದಾವಣಗೆರೆಯಲ್ಲಿದೆ.

ದಾವಣಗೆರೆಯಿಂದ ಹರಿಹರಕ್ಕೆ ಹೋಗಲು ರಾತ್ರಿ ಸಮಯದಲ್ಲಿ ಬಸ್ಸುಗಳು, ಅಟೋ ಇನ್ನಿತರೆ ವಾಹನಗಳ ಸೌಲಭ್ಯವಿದೆ. ಇಂತಹ ಘಟನೆಯಾದಾಗ ನಾನು ಒಬ್ಬ ಆಸ್ಪತ್ರೆಯ ಆಡಳಿತಾಧಿಕಾರಿಯಾಗಿ ತಕ್ಷಣ ಆಸ್ಪತ್ರೆಗೆ ಬಂದು ಪರಿಶೀಲನೆ ಮಾಡುವುದು ನನ್ನ ಆದ್ಯಕರ್ತವ್ಯವಾಗಿತ್ತು ಎನ್ನುವುದು ನಿಜ. ನನಗೆ ಮಾಹಿತಿ ಬರುವ ಪೂರ್ವದಲ್ಲಿ ಕರ್ತವ್ಯದಲ್ಲಿದ್ದ ವೈದ್ಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರಿಗೆ ಮಾಹಿತಿ ನೀಡಿದ ವಿಚಾರವನ್ನು ಸದರಿ ವೈದರು ನನಗೆ ತಿಳಿಸಿದ್ದರು.

ಮಾರನೇ ದಿನ ಬೆಳಿಗ್ಗೆ 9–30 ಕ್ಕೆ ನಾನು ಆಸ್ಪತ್ರೆಗೆ ನನ್ನ ಕರ್ತವ್ಯಕ್ಕೆ ಬಂದೆ. ಆ ಸಮಯದಲ್ಲಿ ಘಟನೆ ನಡೆದಿದೆ ಅಂತಾ ಹೇಳುವ ಸಮಯದಲ್ಲಿ ಯಾವ ಯಾವ ವಸ್ತುಗಳು ಎಲ್ಲಿ ಎಲ್ಲಿ ಇದ್ದವು ಎಂದು ಪರಿಶೀಲನೆ ಮಾಡಿರುತ್ತೇನೆ. ನಾನು ನೋಡಿದಾಗ ಒಂದು ಜೊತೆ ಚಪ್ಪಲಿ ಬಿದ್ದಿತ್ತು. ರಕ್ತದ ಕಲೆ ಇತ್ತು. ತುರ್ತು ನಿಗಾ ಘಟಕದ ಸ್ಥಳದಲ್ಲಿ ಚಪ್ಪಲಿ ಬಿದ್ದಿತ್ತು. ಸದರಿ ಘಟಕದ ಸ್ಥಳ ವೈದ್ಯಾಧಿಕಾರಿಗಳ ಕೊಠಡಿಯ ಮುಂಭಾಗದಲ್ಲಿ ಇರುತ್ತದೆ.

ಬೆಳಿಗ್ಗೆ 6–00 ಗಂಟೆಗೆ ಡಿ–ದರ್ಜೆ ನೌಕರರು ನಮ್ಮ ಆಸ್ಪತ್ರೆಯನ್ನು ಕ್ಲೀನ್ ಮಾಡುತ್ತಾರೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನಾನು ಆಸ್ಪತ್ರೆಗೆ ಹೋದಾಗ ಚಪ್ಪಲಿ ಮತ್ತು ರಕ್ತದ ಮಾದರಿ ಇರಲಿಲ್ಲ. ಡಾ. ಸವಿತಾ ಇವರು ಪೊಲೀಸರು ಅವುಗಳನ್ನು ವಶಪಡಿಸಿಕೊಂಡು ಹೋಗಿರುತ್ತಾರೆ ಎಂದು ತಿಳಿಸಿದರು. ಪೊಲೀಸರು ನಮ್ಮ ಆಸ್ಪತ್ರೆಯಲ್ಲಿ ಯಾವುದೇ ಕೆಲಸ ನಿರ್ವಹಿಸಬೇಕಾದಲ್ಲಿ ನನ್ನ ಅನುಮತಿ ಪಡೆಯಬೇಕಾಗುತ್ತದೆ ಎನ್ನುವುದು ನಿಜ. ಚಪ್ಪಲಿ ಮತ್ತು ರಕ್ತದ ಮಾದರಿಯನ್ನು ಪೊಲೀಸರು ರಾತ್ರಿ ಪಾಳೆಯ ಕರ್ತವ್ಯದಲ್ಲಿದ್ದ ವೈದ್ಯರ ಅನುಮತಿ ಪಡೆದು ಅಮಾನತ್ತುಪಡಿಸಿಕೊಂಡಿರುತ್ತಾರೆ. ರಾತ್ರಿ ಪಾಳೆಯದಲ್ಲಿದ್ದ ವೈದ್ಯರು ಪೊಲೀಸರಿಗೆ ಲಿಖಿತವಾಗಿ ಅನುಮತಿ ನೀಡಿಲ್ಲ.

ನಮ್ಮ ಆಸ್ಪತ್ರೆಗೆ ಯಾರಾದರೂ ಬಂದಲ್ಲಿ ಹಾಗೂ ಹೋದಲ್ಲಿ ಅದರ ಬಗ್ಗೆ ಬರೆಯಲು ಮಿನಿಟ್ಸ ಬುಕ್ ಇರುತ್ತದೆ. ರಾತ್ರಿ ಪೊಲೀಸರು ಬಂದಿದ್ದರ ಬಗ್ಗೆ ಸದರಿ ಬುಕ್ ನಲ್ಲಿ ನಮೂದು ಮಾಡಿಲ್ಲ. ರಾತ್ರಿ 10–45 ಗಂಟೆಗೆ ಪೊಲೀಸರಿಗೆ ರಾತ್ರಿ ಕರ್ತವ್ಯದ ವೈದ್ಯರು ಮಾಹಿತಿ ಕೊಟ್ಟಾಗ ತಕ್ಷಣ ಪೊಲೀಸರು ಬಂದಿರುತ್ತಾರೆ ಎಂದು ತಿಳಿಸಿದರು. ನಮ್ಮ ಆಸ್ಪತ್ರೆಯಲ್ಲಿರುವ ಎಲೆಕ್ಟ್ರಾನಿಕ್ ವಸ್ತುಗಳು ರೀಪೇರಿಗೆ ಬಂದಾಗ ಅವುಗಳ ಬಗ್ಗೆ ಸ್ಟಾಕ್ ರಿಜಿಸ್ಟರ್ ನಲ್ಲಿ ನಮೂದು ಮಾಡುತ್ತೇವೆ.

ಬೆಳಿಗ್ಗೆ ಆಸ್ಪತ್ರೆಗೆ ಬಂದಾಗ ಆಸ್ಪತ್ರೆಯಲ್ಲಿರುವ ಸಿಸಿ ಟಿ.ವಿ. ಫೋಟೇಜ್ ನೋಡಿ ಪರಿಶೀಲನೆ ಮಾಡಿದ್ದೇನೆ. ನಾನು ನೋಡಿದಾಗ ರಾತ್ರಿ ನಡೆದ ಘಟನೆ ಸಿಸಿ ಟಿ ವಿ ಯಲ್ಲಿ ನಮೂದು ಆಗಿಲ್ಲ. ಘಟನೆ ನಡೆದಿದೆ ಅಂತಾ ಹೇಳುವ ಸಮಯದಿಂದ ಬೆಳಗಿನವರೆಗೆ ಸಿಸಿ ಟಿ ವಿ ದೃಷ್ಯಾವಳಿಗಳು ನಮೂದು ಆಗಿರುವುದಿಲ್ಲ. ಅದರ ಹಿಂದಿನ ಸಮಯದ ದೃಷ್ಯಾವಳಿಗಳು ನಮೂದು ಆಗಿವೆ. ನಂತರ ದೃಷ್ಯಾವಳಿಗಳು ಮುಂದುವರೆದಿರುವುದಿಲ್ಲ ಕಾಣ ಅದು ರಿಪೇರಿಗೆ ಬಂದಿರುತ್ತದೆ. ಎಲ್ಕ್ಟ್ರಿಕಲ್ ವೈರಿಂಗ್ ಕೆಲಸ ನಡೆಯುತ್ತಿದ್ದರಿಂದ ನಂತರ ದೃಷ್ಯಾವಳಿಗಳು ಸಿಸಿ ಟಿ ವಿ ಕ್ಯಾಮರಾದಲ್ಲಿ ಸೆರೆಯಾಗಿಲ್ಲ. ಎಲೆಕಿಟ್ರಕಲ್ ವೈರ್

ನಡೆಯುತ್ತಿದ್ದರ ಬಗ್ಗೆ ದಾಖಲೆ ಇದೆ. ಅದನ್ನು ಪೊಲೀಸರಿಗೆ ನಾನು ಕೊಟ್ಟಿಲ್ಲ. ಎಲೆಕಿಟ್ರಕಲ್ ರಿಪೇರಿ ಮಾಡುವವರು ಹಗಲು ಮತ್ತು ರಾತ್ರಿ ಸಹ ಕೆಲಸ ಮಾಡುತ್ತಿದ್ದರು. ದಿ.31-01-2023 ರಿಂದ 07-09-2023 ರ ರವರೆಗೆ ಎಲ್ಟೆಕ್ಟಿಕಲ್ ದುರಸ್ತಿ ಕೆಲಸ ನಡೆಯುತ್ತಿತ್ತು. ನಮ್ಮ ಆಸ್ಪತ್ರೆಯಲ್ಲಿ ಎಲೆಕಿಟ್ರಕಲ್ ದುರಸ್ತಿ ಕೆಲಸ ನಡೆಯುತ್ತಿಲ್ಲದಿದ್ದರೂ ಸಹ ನಡೆಯುತ್ತಿತ್ತು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಫಿರ್ಯಾದಿಜೊತೆ ಶಾಮೀಲಾಗಿ ಹಾಗೂ ಅವರ ಪ್ರಭಾವಕ್ಕೆ ಒಳಗಾಗಿ ಘಟನೆ ನಡೆದಿದೆ ಎಂದು ಹೇಳಿದ ಸಮಯದ ಸಿಸಿ ಟಿ ವಿ ದೃಷ್ಯಾವಳಿಗಳ ಫೋಟೇಜ್ ಇರಲಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ರಾತ್ರಿ ಸಮಯದಲ್ಲಿ ಒಬ್ಬ ರೋಗಿ ಆಸ್ಪತ್ರೆಗೆ ಬಂದಾಗ ಹೊರರೋಗಿ ಚೀಟಿ ಮಾಡಿಸಿಕೊಂಡು ಬರುತ್ತಾರೆ. ನಂತರ ಆ ಚೀಟಿಯನ್ನು ವೈದ್ಯರು ಪಡೆದು ರೋಗಿಯನ್ನು ಪರೀಕ್ಷೆ ಮಾಡುತ್ತಾರೆ. ಚೀಟಿ ಇಲ್ಲದಿರುವ ಸಮಯದಲ್ಲಿ ವೈದರು ರೋಗಿಯನ್ನು ಪರೀಕ್ಷೆ ಮಾಡುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ – ತುರ್ತು ಸಮಯದಲ್ಲಿ ನೋಡುತ್ತಾರೆ ಎಂದು ಉತ್ತರಿಸಿರುತ್ತಾರೆ. ಓಪಿಡಿ ಚೀಟಿ ಮಾಡುವುದು ಸಿಬ್ಬಂದಿ ಕರ್ತವ್ಯ .ವೈದ್ಯರ ಕರ್ತವ್ಯವಾಗಿರುವುದಿಲ್ಲ.

ನಿಪಿ.12 ಮತ್ತು 13 ಓಪಿಡಿ ನಂ.39318 ಅಂತಾ ಎರಡೂ ಒಂದೇ ನಂಬರ್ ಇರುತ್ತವೆ. ಒಂದು ಓಪಿಡಿ ನಂಬರನ್ನು ಒಬ್ಬ ರೋಗಿಗೆ ಮಾತ್ರ ಕೊಡುತ್ತಾರೆ. ಇಬ್ಬರು ರೋಗಿಗೆ ಒಂದೇ ಓಪಿಡಿ ಚೀಟಿ ಕೊಡಲು ಬರುವುದಿಲ್ಲ. ನಿಪಿ.13 ಓಪಿಡಿ ಚೀಟಿಯಲ್ಲಿ ಮಾರುತಿ ಅಂತಾ ಬರೆದಿದ್ದನ್ನು ಹೊಡೆದು ಹಾಕಿ ಮಾರುತಿ ನೇಕಾರ್ ಎಂದು ಬರೆಯಲಾಗಿದೆ ಎನ್ನುವುದು ನಿಜ. ಸದರಿ ನಿಪಿ.12 ಮತ್ತು 13 ಕರ್ತವ್ಯದ ವೈದ್ಯರು ಕೊಟ್ಟ ದಾಖಲೆಯನ್ನು ನಾನು ದೃಢೀಕರಿಸಿ ಕೊಟ್ಟಿರುತ್ತೇನೆ.

ಹಲ್ಲೆಗೆ ಒಳಗಾದ ರೋಗಿ ಆಸ್ಪತ್ರೆಗೆ ಬಂದಾಗ ಮೊದಲು ಚಿಕಿತ್ಸೆ ನೀಡಿ ನಂತರ ಎಂ.ಎಲ್.ಸಿ ಮಾಡಿ, ನಂತರ ಪೊಲೀಸರಿಗೆ ಮಾಹಿತಿ ಕೊಡುತ್ತೇವೆ. ಈ ರೀತಿ ಮಾಡುತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರ ಜೊತೆ ಶಾಮೀಲಾಗಿ ಪೊಲೀಸರ ಕೋರಿಕೆ ಮೇರೆಗೆ ನಿಪಿ.12 ಮತ್ತು 13 ಓಪಿಡಿ ಚೀಟಿಯನ್ನು ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು.

ಕುಮಾರ ಈತನು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಓಪಿಡಿ ರಸೀದಿ, ಎಂ.ಎಲ್.ಸಿ. ರಿಜಿಸ್ಟರ್ ಪೊಲೀಸರಿಗೆ ಕೊಟ್ಟಿರುವುದಿಲ್ಲ. ಕುಮಾರನಿಗೆ ಸಂಬಂಧಪಟ್ಟಂತೆ ನಮ್ಮ ಆಸ್ಪತ್ರೆಯಲ್ಲಿ ಎಂ.ಎಲ್.ಸಿ. ರಿಜಿಸ್ಟರ್ ಮಾಡಿಲ್ಲ, ಆತನನ್ನು ತುರ್ತಾಗಿ ದಾವಣಗೆರೆ ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ. ಕುಮಾರನಿಗೆ ಸಂಬಧಪಟ್ಟಂತೆ ಕರ್ತವ್ಯದಲ್ಲಿದ್ದ ಡಾ. ಸವಿತಾ ಇವರಿಂದ ಮಾಹಿತಿ ಪಡೆದು, ಆತನ ಬಗ್ಗೆ ಬರೆಯಲಾಗಿದೆ.

ಅಂಬುಲನ್ಸನಲ್ಲಿ ಹೋಗುವ ರೋಗಿಯ ಹೆಸರು , ದಿನಾಂಕ , ಸಮಯವನ್ನು ರಿಜಿಸ್ಟರ್ ನಲ್ಲಿ ನಮೂದು ಮಾಡುತ್ತಾರೆ. ಆ ಪ್ರಕಾರ ಸದರಿ ಬುಕ್ ನಲ್ಲಿ ನಮೂದು ಆಗಿರುತ್ತದೆ. ಆ ದಾಖಲೆ ನಮ್ಮ ಬಳಿ ಇದೆ , ಅದನ್ನು ಪೊಲೀಸರಿಗೆ ಕೊಟ್ಟಿಲ್ಲ.

ಪೊಲೀಸರು ಕೇಳಿದ ಪ್ರಕಾರ ಗಾಯಗಳುಗಳ ಗಾಯದ ಪ್ರಮಾಣಪತ್ರ, ಓಪಿಡಿ ಚೀಟಿ ನಿಪಿ.12 ಮತ್ತು 13 ನೀಡಿಲ್ಲ , ಪೊಲೀಸರ ಕೋರಿಕೆ ಮೆರೆಗೆ ಅವುಗಳನ್ನು ಸೃಷ್ಟಿಸಿ ಕೊಟ್ಟಿರುತ್ತೇನೆ ಎನ್ನುವುದು ಸುಳ್ಳು. ಪೊಲೀಸರ ಜೊತೆ ಶಾಮಿಲಾಗಿ, ಉದ್ದೇಶಪೂರ್ವಕವಾಗಿ ಸಿಸಿ ಟಿ ವಿ ಪೋಟೇಜಗ್ ಗಳನ್ನು ನಾನೇ ಡಿಲಿಟ್ ಮಾಡಿಸಿರುತ್ತೇನೆ ಎನ್ನುವುದು ಸುಳ್ಳು. ನಮ್ಮ ಆಸ್ಪತ್ರೆಯಲ್ಲಿ ಹಾಗೂ ಇನ್ನಿತರೆ ಶಸ್ತ್ರ ಚಿಕಿತ್ಸೆಗಳು ಸರಳವಾಗಿ ನಡೆಯುತ್ತವೆ. ಅದೇ ಪ್ರಕಾರ ದಿ.31-01-2023 ರಿಂದ 07-09-2023 ರ ಅವಧಿಯಲ್ಲಿ ನಮ್ಮ ಆಸ್ಪತ್ರೆಯಲ್ಲಿ ಹೆರಿಗೆ ಇನ್ನಿತರೆ ಶಸ್ತ್ರ ಚಿಕಿತ್ಸೆಗಳು ನಡೆದಿರುತ್ತವೆ.

ನಾನು ಆಸ್ಪತ್ರೆಯ ಆಡಳಿತಾಧಿಕಾರಿಯಾಗಿ ನನ್ನ ಕರ್ತವ್ಯವನ್ನು ನಾನು ನಿರ್ವಹಿಸದೇ ಪೊಲೀಸರ ಶಾಮೀಲಾಗಿ ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿ, ತನಿಖಾಧಿಕಾರಿಗಳಿಗೆ ಕೊಟ್ಟಿರುತ್ತೇನೆ ಎನ್ನುವುದು ಸುಳ್ಳು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.